# ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆ:

# “ವಿವಿಧ ಇಂಧನದ ಮೂಲಗಳು ಹಾಗೂ ಜೈವಿಕ ಇಂಧನದ ಮಹತ್ವ”

**ಹಾಗೂ**

## “ಉ.ಪ್ರಾ.ವಿ.ಕೇಂದ್ರ, ಬಾಗಲಕೋಟೆಯ ಜಾಲತಾಣ ಅನಾವರಣ ಕಾರ್ಯಕ್ರಮ”

**ದಿನಾಂಕ:** 25.09.2023 ರಂದು **ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ** ಹಾಗೂ **ಜವಾಹರ್ ನವೋದಯ ಪ್ರೌಢಶಾಲೆ, ಆಲಮಟ್ಟಿ (ಡ್ಯಾಂ ಸೈಟ್)** ಇವರ ಸಂಯುಕ್ತ ಆಶ್ರಯದಲ್ಲಿ **“ಉಪನ್ಯಾಸ ಹಾಗೂ ಪ್ರಾತ್ಯಕ್ಷಿಕೆ: ವಿವಿಧ ಇಂಧನದ ಮೂಲಗಳು ಹಾಗೂ ಜೈವಿಕ ಇಂಧನದ ಮಹತ್ವ”** ಹಾಗೂ **“ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆಯ ಜಾಲತಾಣ ಅನಾವರಣ”** ಕಾರ್ಯಕ್ರಮವನ್ನು ಆಯೋಜಿಸಲಾಯಿತು, ಈ ಕಾರ್ಯಕ್ರಮದಲ್ಲಿ **ಜವಾಹರ್ ನವೋದಯ ಪ್ರೌಢಶಾಲೆ, ಆಲಮಟ್ಟಿ (ಡ್ಯಾಂ ಸೈಟ್)** ನ ಒಟ್ಟು 60 ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ **ಡಾ. ಎನ್.ಕೆ.ಹೆಗಡೆ** ಕುಲಪತಿಗಳು, ತೋ.ವಿ.ವಿ ಹಾಗೂ ಅಧ್ಯಕ್ಷರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ಹಾಗೂ ಇತರ ಗಣ್ಯರು **ಸಸಿಗೆ ನೀರುಣಿಸುವ** ಮೂಲಕ ಹಾಗೂ **ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಬಾಗಲಕೋಟೆಯ ಜಾಲತಾಣ ಅನಾವರಣ (https://srscbagalkot.karnataka.gov.in/)** ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಂದುವರೆದು, ಉದ್ಘಾಟಕರ ಭಾಷಣ ಮಾಡಿದ **ಡಾ. ಎನ್.ಕೆ.ಹೆಗಡೆ** ಕುಲಪತಿಗಳು, ತೋ.ವಿ.ವಿ ಹಾಗೂ ಅಧ್ಯಕ್ಷರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು, ವಿದ್ಯಾರ್ಥಿಗಳಿಗೆ ಜೈವಿಕ ಇಂಧನದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸುತ್ತ, ವಿದ್ಯಾರ್ಥಿಗಳು ಸದರಿ ಉಪನ್ಯಾಸದಲ್ಲಿನ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ತಮ್ಮ ವೈಜ್ಞಾನಿಕ ಚಿಂತನೆಯನ್ನು ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

ಅದರಂತೆ, ಕಾರ್ಯಕ್ರಮದ ಅಧ್ಯಕ್ಷರಾಗಿ ಆಗಮಿಸಿದಂತಹ **ಡಾ.ಟಿ.ಬಿ.ಅಳ್ಳೊಳ್ಳಿ,** ಕುಲಸಚಿವರು, ತೋ.ವಿ.ವಿ ಹಾಗೂ ಸದಸ್ಯ ಕಾರ್ಯದರ್ಶಿಗಳು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಪ್ರಸ್ತುತ ಕಾಲಮಾನದಲ್ಲಿ ಜೈವಿಕ ಇಂಧನದ ಉಪಯೋಗಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು, ಮುಂದುವರೆದು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆಯ ಕಾರ್ಯವೈಖರಿಯ ಬಗ್ಗೆ ತಿಳಿಸುತ್ತ ಮುಂಬರುವ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರಕ್ಕೆ ಭೇಟಿ ನೀಡುವಂತೆ ಕರೆನೀಡಿದರು.

ತದನಂತರ, ಕಾರ್ಯಕ್ರಮದ ಅತಿಥಿಗಳಾಗಿ ಆಗಮಿಸಿದಂತಹ **ಶ್ರೀಮತಿ ಫಿ.ಶಾಂತಿ,** ಮುಖ್ಯೋಪಾಧ್ಯಯರು, ಜವಾಹರ್ ನವೋದಯ ಪ್ರೌಢಶಾಲೆ, ಆಲಮಟ್ಟಿ (ಡ್ಯಾಂ ಸೈಟ್) ರವರು ಮಾತನಾಡಿ, ಸದರಿ ಉಪನ್ಯಾಸ ಕಾರ್ಯಕ್ರಮಕ್ಕಾಗಿ ತಮ್ಮ ಶಾಲೆಯನ್ನು ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರದ ಎಲ್ಲ ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ತಿಳಿಸಿದರು ಹಾಗೂ ಮುಂಬರುವ ದಿನಗಳಲ್ಲಿ ಕೇಂದ್ರದ ವತಿಯಿಂದ ಆಯೋಜಿಸಲಾಗುವ ಎಲ್ಲ ವೈಜ್ಞಾನಿಕ ಕಾರ್ಯಕ್ರಮದಲ್ಲಿ ಅತ್ಯುತ್ಸಾಹದಿಂದ ಭಾಗವಹಿಸುವುದಾಗಿ ತಿಳಿಸಿದರು.

ಮುಂದುವರೆದು, ಸದರಿ ಉಪನ್ಯಾಸ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದಂತಹ **ಡಾ. ಭಾರತಿ ಮೇಟಿ,** ಪ್ರಾಧ್ಯಾಪಕರು, ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ ಹಾಗೂ ಸದಸ್ಯರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ಮಾತನಾಡಿ, **“ವಿವಿಧ ಇಂಧನದ ಮೂಲಗಳು ಹಾಗೂ ಜೈವಿಕ ಇಂಧನ”** ಗಳ ಸಂಪೂರ್ಣ ವಿಸ್ತೃತ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು ಹಾಗೂ ವಿದ್ಯಾರ್ಥಿಗಳೊಂದಿಗೆ ಪ್ರಶ್ನೋತ್ತರಗಳ ಸಮಾಲೋಚನೆ ಹಾಗೂ ಪ್ರಾತ್ಯಕ್ಷಿಕೆಯನ್ನು ನಡೆಸುವುದರ ಮೂಲಕ **ಜೈವಿಕ ಇಂಧನಗಳ ತಯಾರಿಕೆ, ಉಪಯೋಗಗಳು ಹಾಗೂ ಜೈವಿಕ ಇಂಧನಗಳ ಮೂಲಕ ಆಗುವ ಆದಾಯಗಳ** ಬಗ್ಗೆ ತಿಳಿಸಿದರು.

ಸದರಿ ಕಾರ್ಯಕ್ರಮವನ್ನು, **ಶ್ರೀ ಈರಣ್ಣ ಬುಳ್ಳಾ,** ಕ್ಯೂರೇಟರ್,ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ನಿರೂಪಿಸಿದರು ಹಾಗೂ **ಶ್ರೀ ಆಸೀಫ ಬಾಗವಾನ,** ತಾಂತ್ರಿಕ ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ವಂದಿಸಿದರು.

ಮುಂದುವರೆದು, ಸದರಿ ಕಾರ್ಯಕ್ರಮದಲ್ಲಿ **ಶ್ರೀಮತಿ ವಾಣಿಶ್ರೀ ಪಾಟೀಲ, ಶ್ರೀ ಸಂಜೀವ ಕುಮಾರ್,** ಶಿಕ್ಷಕರು, ಜವಾಹರ್ ನವೋದಯ ಪ್ರೌಢಶಾಲೆ, ಆಲಮಟ್ಟಿ (ಡ್ಯಾಂ ಸೈಟ್) ಹಾಗೂ **ಶ್ರೀ ಗಂಗನಗೌಡ ಪಾಟೀಲ** ಸಹಾಯಕರು, ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ, ಬಾಗಲಕೋಟೆ ರವರು ಉಪಸ್ಥಿತರಿದ್ದರು.




















SRSC/BGK/01/01/2020-21


SRSC/BGK/01/01/2020-21


SRSC/BGK/01/01/2020-21






FOSSIL FUELS


When Fossil Fuels are Exhausted ?






Technology Promotion Society
Department of IT, BT and S&T








VIGYAN JYOTI
Empowering Girls In STEM
VIGYAN JYOTI KNOWLEDGE CENTRE



***********